ಶ್ರೀ ಪಿ. ರಾಜೀವ್ (ಕುಡುಚಿ):– ಮಾನ್ಯ ಅಧ್ಯಕ್ಷರೆ, ನಾನು ಎರಡು ಪ್ರಶ್ನೆಗಳನ್ನು ಕಳುಹಿಸಿದ್ದೆ. ಒಂದು ಕೆ.ಎ.ಎಸ್. ಬಗ್ಗೆ ಇನ್ನೊಂದು ರಸ್ತೆಗಳಲ್ಲಿ circle ಆಗುವುದರ ಬಗ್ಗೆ. ಈಗ ನಾನು ಯಾವ ವಿಷಯದ ಬಗ್ಗೆ ಪ್ರಶ್ನೆ ಕೇಳಬೇಕೆಂದು confusion ಇದೆ.

ಅಧ್ಯಕ್ಷರು:– ಕೆ.ಎ.ಎಸ್. ಬಗ್ಗೆ ಕೇಳಿ.

5 ವಿಷಯ: ಕೆ.ಎ.ಎಸ್. ನೋಟಿಫಿಕೇಷನ್ ಬಗ್ಗೆ.

ಶ್ರೀ ಪಿ. ರಾಜೀವ್:– ಮಾನ್ಯ ಅಧ್ಯಕ್ಷರೆ, ರಾಜ್ಯ ಸರ್ಕಾರ 2011 ರ ಕೆ.ಎ.ಎಸ್. ಪರೀಕ್ಷೆಯ ನೋಟಿಫಿಕೇಷನ್ ಅನ್ನು ವಾಪಸ್ಸು ತೆಗೆದುಕೊಂಡಿದ್ದಾರೆ. ಪ್ರಾಮಾಣಿಕ ಮತ್ತು ಅರ್ಹ ವಿದ್ಯಾರ್ಥಿಗಳಿಗೆ ತೊಂದರೆಯಾಗಬಾರದು ಎನ್ನುವ ಕಾರಣಕ್ಕಾಗಿ ನೋಟಿಫಿಕೇಷನ್ ಅನ್ನು ಕ್ಯಾನ್ಸಲ್ ಮಾಡುತ್ತೇವೆ ಎಂದು ಸರ್ಕಾರ ತೀರ್ಮಾನ ಮಾಡಿತು. ಈಗ ಹೊಸ ನೋಟಿಫಿಕೇಷನ್ ಅನ್ನು ಹೊರಡಿಸಿದ್ದಾರೆ. 2011 ರ ಪರೀಕ್ಷೆಯಲ್ಲಿ ಯಾರು ಭಾಗವಹಿಸಿದ್ದರು, ಅವರೆಲ್ಲರಿಗೂ ಅವಕಾಶ ಸಿಗುತ್ತಿಲ್ಲ. ಅಂದರೆ ಪ್ರಾಮಾಣಿಕ, ಬಡ ವಿದ್ಯಾರ್ಥಿಗಳೂ ಕೂಡ ಇದರಿಂದ ವಂಚಿತರಾಗುತ್ತಾರೆ. ಅದಕ್ಕಾಗಿ ಅವರಿಗೆ ಅವಕಾಶ ಕೊಡುವಂತಹ ತೀರ್ಮಾನವನ್ನು ತಾವು ಕೊಡಬೇಕು.

ಶ್ರೀ ಟಿ.ಬಿ. ಜಯಚಂದ್ರ (ಮಾನ್ಯ ಮುಖ್ಯಮಂತ್ರಿಯವರ ಪರವಾಗಿ):– ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ತಂದಿರುವಂತಹ ಪ್ರಶ್ನೆಗೆ ಮಾನ್ಯ ಮುಖ್ಯಮಂತ್ರಿಯವರಿಂದಲೇ ಉತ್ತರವನ್ನು ಕೊಡಿಸಬೇಕಾಗುತ್ತದೆ. ಅವರಿಂದ ಉತ್ತರ ಕೊಡಿಸುತ್ತೇನೆ.

ಶ್ರೀ ಪಿ. ರಾಜೀವ್:– ಮಾನ್ಯ ಅಧ್ಯಕ್ಷರೆ, ಯಾವಾಗ ಉತ್ತರ ಕೊಡಿಸಬಹುದು?

ಅಧ್ಯಕ್ಷರು:– ಮಾನ್ಯ ಸಚಿವರೆ ಆದಷ್ಟು ಬೇಗನೆ ಎಂದು ಹೇಳಿ.

ಶ್ರೀ ಟಿ.ಬಿ. ಜಯಚಂದ್ರ:– ಉತ್ತರ ಕೊಡಿಸಲಾಗುವುದು.

ಅಧ್ಯಕ್ಷರು:– ಶ್ರೀ ಕೆ. ರಾಜಣ್ಣ ಹಾಜರಿಲ್ಲ. ಶ್ರೀ ಹೆಚ್.ಕೆ. ಕುಮಾರಸ್ವಾಮಿಯವರು ಮಾತನಾಡುವುದು.

6. ವಿಷಯ: ರಸ್ತೆ ಕಾಮಗಾರಿ ಬಗ್ಗೆ.

ಶ್ರೀ ಹೆಚ್.ಕೆ. ಕುಮಾರಸ್ವಾಮಿ (ಸಕಲೇಶಪುರ):– ಮಾನ್ಯ ಅಧ್ಯಕ್ಷರೆ, ಸಕಲೇಶಪುರ ತಾಲ್ಲೂಕಿನಲ್ಲಿ ಒಣಗೂರು ಜನ್ನಾಪುರ ಎಂಬ ರಸ್ತೆ, ಹಾನಬಾಳ್, ಆನೆಮಾಲ್, ಹೆತ್ತೂರು ಮಾರ್ಗವಾಗಿ ಹೋಗುವಂಥದ್ದು. ಮಾನ್ಯ ಲೋಕೋಪಯೋಗಿ ಸಚಿವರೆ ಬಂದು ಗುದ್ದಲಿ ಪೂಜೆ ಮಾಡಿ ಎರಡು ತಿಂಗಳು ಆಗಿದೆ. ಇದುವರೆಗೂ ಪ್ರಾರಂಭವಾಗಿಲ್ಲ. ಅಲ್ಲಿನ ಜನರು ಪ್ರತಿಭಟನೆ ಮಾಡುತ್ತಿದ್ದಾರೆ. ಯಾವಾಗ ಪ್ರಾರಂಭ ಮಾಡುತ್ತೀರಿ? Work order issue ಮಾಡಿದ್ದೀರೋ ಇಲ್ಲವೋ ಎನ್ನುವುದನ್ನು ದಯಮಾಡಿ ಹೇಳಿ.

ಶ್ರೀ ಟಿ.ಬಿ. ಜಯಚಂದ್ರ:– ಮಾನ್ಯ ಅಧ್ಯಕ್ಷರೆ, ಈ ವಿಚಾರವನ್ನು ಲೋಕೋಪಯೋಗಿ ಇಲಾಖೆಯ ಸಚಿವರ ಗಮನಕ್ಕೆ ತಂದು ಅವರಿಂದಲೇ ಉತ್ತರ ಕೊಡಿಸುತ್ತೇನೆ.

ಅಧ್ಯಕ್ಷರು:– ಆಯಿತು.

7. ವಿಷಯ: ನಿವೃತ್ತರಾದ ಸೈನಿಕರಿಗೆ ನಿಡಲಾಗುತ್ತಿರುವ ವಿವಿಧ ಸೌಲಭ್ಯಗಳನ್ನು ಅರೆ ಸೇನಾಪಡೆ ಯೋಧರಿಗೆ ನೀಡುವ ಬಗ್ಗೆ.

ಶ್ರೀ ಕೆ.ಜಿ. ಬೋಪಯ್ಯ (ವಿರಾಜಪೇಟೆ):– ಮಾನ್ಯ ಅಧ್ಯಕ್ಷರೆ, ರಕ್ಷಣಾ ವ್ಯವಸ್ಥೆಯನ್ನು ವಿವಿಧ ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸಿ ನಿವೃತ್ತರಾದ ಸೈನಿಕರಿಗೆ ನೀಡಲಾಗುವ ವಿವಿಧ ಸೌಲಭ್ಯಗಳನ್ನು ಅರೆ ಸೇನಾ ಪಡೆಯ ಯೋಧರಿಗೂ ಸಹ ವಿಸ್ತರಿಸುವುದು ಅವಶ್ಯಕತೆ ಇದೆ. ಈ ನಿಟ್ಟಿನಲ್ಲಿ ಅರೆಸೇನಾಪಡೆಗೆ ಸಂಬಂಧಿಸಿದ ಬಿಎಸ್ಎಫ್, ಸಿಆರ್ಪಿಎಫ್, ಸಿಐಎಸ್ಎಫ್, ಐಟಿಬಿಪಿ ಅಂತಹ ನಿವೃತ್ತ ಯೋಧರುಗಳಿಗೆ ಸಿಗುವ ಸವಲತ್ತುಗಳಾದ ಸಿಎಸ್ಡಿ ಕ್ಯಾಂಟೀನ್ ಸೌಲಭ್ಯ ಮತ್ತು ಮಧ್ಯದ ಪೂರೈಕೆ, ಸೈನಿಕ ಕಲ್ಯಾಣ ಬೋರ್ಡ್ನ ಸೌಲಭ್ಯಗಳು ಮತ್ತು ಪುನರ್ ಉದ್ಯೋಗದ ಅವಕಾಶ, ವಿಧವೆಯರಿಗೆ ಸರ್ಕಾರಿ ಉದ್ಯೋಗ ಹಾಗೂ ಪುನರ್ ವಸತಿಗಳಂತಹ ಸೌಲಭ್ಯಗಳಿಂದ